All India Radio: Bangalore
National Bulletin In Kannada
29.09.2025 1.10 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

29.09.2025 1.10 p.m.

<><><><>

## ಮುಖ್ಯಾಂಶಗಳು

೧. ಪಿಎಂ ಇ-ಡ್ರೈವ್ ಯೋಜನೆಯಡಿ ದೇಶಾದ್ಯಂತ ಸಾರ್ವಜನಿಕ ವಿದ್ಯುತ್ ವಾಹನ ಕೇಂದ್ರಗಳ ಪ್ರಾರಂಭಕ್ಕೆ ಮಾರ್ಗಸೂಚಿ ಪ್ರಕಟಿಸಿದ ಕೇಂದ್ರ ಸರ್ಕಾರ

೨. ಮುಂದಿನ ಮೂರು ವರ್ಷಗಳಲ್ಲಿ ೨೦೦ ಹೊಸ ವಂದೇ ಭಾರತ್ ರೈಲುಗಳಿಗೆ ಚಾಲನೆ - ರೈಲ್ವೆ ಸಚಿವ ಅಶ್ವಿನಿ ವೈಷ್ಣವ್

೩. ಆಂತರಿಕ, ಬಾಹ್ಯ ಭದ್ರತಾ ಸವಾಲು ಎದುರಿಸಲು ನೈಜ ಸಮಯದ ಸಿದ್ಧತೆ ಅಗತ್ಯ - ರಕ್ಷಣಾ ಸಚಿವ ರಾಜನಾಥ್ ಸಿಂಗ್

೪. ಮುಂಬರುವ ವಿವಿಧ ರಾಜ್ಯಗಳ ಚುನಾವಣೆಗಳಿಗೆ ಕೇಂದ್ರ ವೀಕ್ಷಕರನ್ನು ನಿಯೋಜಿಸಿದ ಚುನಾವಣಾ ಆಯೋಗ

><><><><><><

ಪಿಎಂ ಇ-ಡ್ರೈವ್ ಯೋಜನೆಯಡಿ ದೇಶಾದ್ಯಂತ ಸುಮಾರು ೭೨ ಸಾವಿರ ೩೦೦ ಸಾರ್ವಜನಿಕ ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರ ಮಾರ್ಗಸೂಚಿಗಳನ್ನು ಹೊರಡಿಸಿದೆ. ಸರ್ಕಾರಿ ಆವರಣಗಳು, ಹೆದ್ದಾರಿಗಳು, ಸಾರ್ವಜನಿಕ ಸಾರಿಗೆ ಕೇಂದ್ರಗಳು ಮತ್ತು ವಾಣಿಜ್ಯ ಸಂಕಿರಣಗಳಲ್ಲಿ ಚಾರ್ಜಿಂಗ್ ಮೂಲಸೌಕರ್ಯಗಳ ಸ್ಥಾಪನೆಯನ್ನು ವೇಗಗೊಳಿಸಲು ಶ್ರೇಣಿಕೃತ ಸಬ್ಸಿಡಿಯನ್ನು ಸರ್ಕಾರ ಒದಗಿಸುತ್ತದೆ ಎಂದು ಕೇಂದ್ರ ಬೃಹತ್

ಕೈಗಾರಿಕಾ ಸಚಿವಾಲಯ ತಿಳಿಸಿದೆ.ಮಾರ್ಗಸೂಚಿಗಳ ಪ್ರಕಾರ ಸರ್ಕಾರಿ ಕಚೇರಿಗಳು ವಸತಿ ಪ್ರದೇಶ, ಆಸ್ಪತ್ರೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಉಚಿತ ಸಾರ್ವಜನಿಕ ಪ್ರವೇಶವನ್ನು ಖಚಿತಪಡಿಸಿದರೆ, ಮೂಲಸೌಕರ್ಯ ಮತ್ತು ಇವಿ ಚಾರ್ಜಿಂಗ್ ಉಪಕರಣಗಳ ಮೇಲೆ ಶೇಕಡ ೧೦೦ರಷ್ಟು ಸಬ್ಸಿಡಿ ದೊರೆಯಲಿದೆ. ರೈಲ್ವೆ ನಿಲ್ದಾಣಗಳು, ವಿಮಾನ ನಿಲ್ದಾಣಗಳು, ಬಸ್ ಟರ್ಮಿನಲ್‌ಗಳು, ಮೆಟ್ರೋ ನಿಲ್ದಾಣಗಳು, ಪುರಸಭೆಯ ವಾಹನ ನಿಲ್ದಾಣ ಸ್ಥಳಗಳು, ಸಾರ್ವಜನಿಕ ವಲಯ ಬಂದರುಗಳು, ಸರ್ಕಾರಿ ಚಾಲಿತ ತೈಲ ಕಂಪನಿಗಳು ಚಿಲ್ಲರೆ ಮಾರಾಟ ಮಳಿಗೆಗಳು ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರಗಳು ನಿರ್ವಹಿಸುವ ಟೋಲ್ ಪ್ಲಾಜಾಗಳಂತಹ ಸಾರ್ವಜನಿಕ ಸ್ಥಳಗಳಿಗೆ ಮೂಲಸೌಕರ್ಯ ವೆಚ್ಚದಲ್ಲಿ ಶೇಕಡ ೮೦ರಷ್ಟು ಹಾಗೂ ಚಾರ್ಜಿಂಗ್ ಉಪಕರಣಗಳ ವೆಚ್ಚದಲ್ಲಿ ಶೇಕಡ ೭೦ರಷ್ಟು ಸಬ್ಸಿಡಿಗೆ ಅರ್ಹತೆ ಪಡೆಯುತ್ತವೆ. ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್ ವೇಗಳಲ್ಲಿರುವ ಶಾಪಿಂಗ್ ಮಾಲ್‌ಗಳು, ಮಾರುಕಟ್ಟೆಗಳು, ರಸ್ತೆ ಬದಿಯ ಸೌಲಭ್ಯಗಳಲ್ಲಿ ಮೂಲಸೌಕರ್ಯದಲ್ಲಿ ಶೇಕಡ ೮೦ರಷ್ಟು ಸಬ್ಸಿಡಿಗೆ ಅರ್ಹತೆ ಪಡೆಯುತ್ತವೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

><><><><><><

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ಬಿಹಾರ ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಇಂದು ಪಾಟ್ನಾ ಜಂಕ್ಷನ್‌ನಿಂದ ಬಿಹಾರಕ್ಕೆ ಏಳು ರೈಲುಗಳನ್ನು ಲೋಕಾರ್ಪಣೆ ಮಾಡಿದರು. ಇವುಗಳಲ್ಲಿ ಮೂರು ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಮತ್ತು ನಾಲ್ಕು ಪ್ರಯಾಣಿಕ ರೈಲುಗಳು ಸೇರಿವೆ. ಸಚಿವ ಅಶ್ವಿನಿ ವೈಷ್ಣವ್ ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ವೇಳೆ ಮಾತನಾಡಿದ ಸಚಿವರು, ಈ ಹಿಂದೆ ರೈಲ್ವೆ ಬಜೆಟ್ ಕೇವಲ ೧ ಸಾವಿರ ಕೋಟಿ ರೂಪಾಯಿ ಇತ್ತು. ಅದು ಈಗ ೧೦ ಸಾವಿರ ಕೋಟಿ ರೂಪಾಯಿಗಳಿಗೆ ತಲುಪಿದೆ. ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಅಭಿವೃದ್ಧಿ ಮತ್ತು ಬಿಹಾರದ ಅಭಿವೃದ್ಧಿಗಾಗಿ ದೊಡ್ಡ ಯೋಜನೆಯನ್ನು

ರೂಪಿಸಿದ್ದಾರೆ. ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಬಿಹಾರದ ಅನೇಕ ಬಾಕಿ ಯೋಜನೆಗಳು ಪೂರ್ಣಗೊಂಡಿವೆ ಎಂದು ಹೇಳಿದರು.

ಧ್ವನಿ : ಅಶ್ವಿನಿ ವೈಷ್ಣವ್ (೨೫ ಸೆಕೆಂಡ್‌ಗಳು)

ಮುಂದಿನ ಮೂರು ವರ್ಷಗಳಲ್ಲಿ, ೨೦೦ ಹೊಸ ವಂದೇ ಭಾರತ್ ರೈಲುಗಳು, ೧೦೦ ಅಮೃತ್ ಭಾರತ್ ರೈಲುಗಳು, ೫೦ ನಮೋ ಭಾರತ್ ಕ್ಷಿಪ್ರ ರೈಲು ಮತ್ತು ೧೭ ಸಾವಿರದ ೫೦೦ ಸಾಮಾನ್ಯ ಹವಾನಿಯಂತ್ರಿತವಲ್ಲದ ಬೋಗಿಗಳು ಜನಸಾಮಾನ್ಯರಿಗೆ ಪ್ರಯಾಣದ ಅನುಭವದಲ್ಲಿ ಕ್ರಾಂತಿಯನ್ನುಂಟು ಮಾಡಲಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

><><><><><

ಆಂತರಿಕ ಮತ್ತು ಬಾಹ್ಯ ಭದ್ರತಾ ಸವಾಲುಗಳನ್ನು ಎದುರಿಸಲು ನೈಜ ಸಮಯದ ಸಿದ್ಧತೆ ಅಗತ್ಯವಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪ್ರತಿಪಾದಿಸಿದರು. ನವದೆಹಲಿಯಲ್ಲಿಂದು ನಡೆದ ಭಾರತೀಯ ಕರಾವಳಿ ಕಾವಲು ಪಡೆಯ ಕಮಾಂಡರ್‌ಗಳ ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಅವರು, ಬಹು ಆಯಾಮದ ಭದ್ರತಾ ಬೆದರಿಕೆಗಳನ್ನು ಎದುರಿಸಲು ರಕ್ಷಣಾ ಪಡೆಗಳು ಸಿದ್ಧವಾಗಿರಬೇಕು ಎಂದು ಹೇಳಿದರು. ಇಂದಿನ ಕಾಲದಲ್ಲಿ ಸವಾಲುಗಳನ್ನು ಎದುರಿಸಲು ಸ್ವಯಂ ಚಾಲಿತ ಪ್ರತಿಕ್ರಿಯೆ ವ್ಯವಸ್ಥೆಗಳನ್ನು ಸಂಯೋಜಿಸುವ ಅಗತ್ಯವಿದೆ. ಇತ್ತೀಚಿನ ದಿನಗಳಲ್ಲಿ ಎಲೆಕ್ಟ್ರಾನಿಕ್ಸ್ ಯುದ್ಧವು ವಾಸ್ತವವಾಗಿದೆ ಎಂದು ಸಚಿವ ರಾಜನಾಥ್ ಸಿಂಗ್ ತಿಳಿಸಿದರು.

><><><><><

ಬಿಹಾರದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳು ಮತ್ತು ವಿವಿಧ ರಾಜ್ಯಗಳಾದ್ಯಂತ ಎಂಟು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗಳಿಗೆ ಕೇಂದ್ರ ವೀಕ್ಷಕರನ್ನು ನಿಯೋಜಿಸುವುದಾಗಿ ಭಾರತೀಯ ಚುನಾವಣಾ ಆಯೋಗ ಘೋಷಿಸಿದೆ. ಈ ವೀಕ್ಷಕರಲ್ಲಿ ಸಾಮಾನ್ಯ, ಪೊಲೀಸ್ ಮತ್ತು

ವೆಚ್ಚ ವೀಕ್ಷಕರು ಸೇರಿರುತ್ತಾರೆ. ಮುಕ್ತ, ನ್ಯಾಯಯುತ ಮತ್ತು ಪಾರದರ್ಶಕ ಚುನಾವಣೆಗಳನ್ನು ಖಚಿತಪಡಿಸಿಕೊಳ್ಳಲು ೩೨೦ ಐಎಎಸ್ ಮತ್ತು ೬೦ ಐಪಿಎಸ್ ಅಧಿಕಾರಿಗಳು ಸೇರಿದಂತೆ ಒಟ್ಟು ೪೭೦ ಅಧಿಕಾರಿಗಳನ್ನು ಕೇಂದ್ರ ವೀಕ್ಷಕರಾಗಿ ನಿಯೋಜಿಸಲಾಗುವುದು. ಅವರು ಪ್ರತಿ ಕ್ಷೇತ್ರದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುತ್ತಾರೆ, ಸುಧಾರಣೆಗಾಗಿ ಪ್ರದೇಶಗಳನ್ನು ಗುರುತಿಸುತ್ತಾರೆ ಮತ್ತು ಕಾರ್ಯಸಾಧ್ಯ ಶಿಫಾರಸುಗಳನ್ನು ಮಾಡುತ್ತಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

><><><><><

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಮಂತ್ರದಿಂದ ಮಾರ್ಗದರ್ಶಿಸಲ್ಪಟ್ಟ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿಶ್ರಾಂತವಾಗಿ ಶ್ರಮಿಸುತ್ತಿದೆ. ಇಂದು, ಈ ವಿಶೇಷ ಸರಣಿ - 'ಸೇವಾ ಪರ್ವ'ದಲ್ಲಿ ಭಾರತದ ಮೊದಲ ಮಾನವಸಹಿತ ಆಳ ಸಮುದ್ರ ಕಾರ್ಯಾಚರಣೆಯಾದ ಸಮುದ್ರಯಾನ ಯೋಜನೆಯ ಮೂಲಕ, ಕೇಂದ್ರ ಸರ್ಕಾರ, ಆಳ ಸಮುದ್ರ ಪರಿಶೋಧನೆಯಲ್ಲಿ ಭಾರತವನ್ನು ವಿಶ್ವದ ನಾಯಕರಲ್ಲಿ ಹೇಗೆ ಇರಿಸುತ್ತಿದೆ ಎಂಬುದರ ಕುರಿತು ವಿಶೇಷ ವರದಿ ಇದೀಗ ಮೂಡಿಬರಲಿದೆ.

ಧ್ವನಿ: ವಿಶೇಷ ವರದಿ: ಚೇತನಾ ರಾಜೇಂದ್ರ (೧ ನಿಮಿಷ ೮ ಸೆಕೆಂಡ್‌ಗಳು)

೨೦೨೧ ರಲ್ಲಿ ಪ್ರಾರಂಭವಾದ ಆಳ ಸಮುದ್ರ ಕಾರ್ಯಾಚರಣೆಯಾದ 'ಸಮುದ್ರಯಾನ ಯೋಜನೆ' ಭಾರತದ ವೈಜ್ಞಾನಿಕ ಮತ್ತು ಕಾರ್ಯತಂತ್ರದ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಸಾಗರ ಸಂಪತ್ತಿನ ಮೇಲೆ ಕೇಂದ್ರೀಕರಿಸುವ ಮತ್ತು ಕಡಲ ಆರ್ಥಿಕತೆಯನ್ನು ಬಲಪಡಿಸುವ ಮೂಲಕ, ಭಾರತವು ಫ್ರಾನ್ಸ್‌ನ ಸಹಯೋಗದೊಂದಿಗೆ ಮತ್ಸ್ಯ ಸಬ್‌ಮರ್ಸಿಬಲ್ ಅನ್ನು ರಚಿಸಿತು. ಮೂರು ಜಲಚರಗಳನ್ನು ಆರು ಸಾವಿರ ಮೀಟರ್‌ಗಳ ಆಳಕ್ಕೆ ಸಾಗಿಸಲು ವಿನ್ಯಾಸಗೊಳಿಸಲಾದ ಈ ಹಡಗು,

ಕಮಾಂಡರ್ ಜತಿಂದರ್ ಪಾಲ್ ಸಿಂಗ್ ಮತ್ತು ರಾಜು ರಮೇಶ್ ಐದು ಸಾವಿರ ಮೀಟರ್ ಆಳಕ್ಕೆ ಧುಮುಕಿದಾಗ ಇತಿಹಾಸವನ್ನು ಸೃಷ್ಟಿಸಿತು. ಸ್ವಾತಂತ್ರ್ಯ ದಿನದಂದು, ಪ್ರಧಾನಿ ನರೇಂದ್ರ ಮೋದಿ ಅವರು, ಸಮುದ್ರದಲ್ಲಿನ ತೈಲ ಮತ್ತು ಅನಿಲ ನಿಕ್ಷೇಪಗಳನ್ನು ಅನ್ವೇಷಿಸುವ ಗುರಿಯನ್ನು ಹೊಂದಿರುವ ರಾಷ್ಟ್ರೀಯ ಆಳ ಜಲ ಪರಿಶೋಧನಾ ಕಾರ್ಯಾಚರಣೆಯನ್ನು ಘೋಷಿಸಿದ್ದಾರೆ. ಇದನ್ನು ಸಮುದ್ರ-ಮಂಥನ್ ಎಂದು ಕರೆದ ಅವರು, ಈ ಉಪಕ್ರಮವನ್ನು ಮಿಷನ್ ಮೋಡ್‌ನಲ್ಲಿ ಕಾರ್ಯಗತಗೊಳಿಸಲಾಗುವುದು. ಇದು ಇಂಧನ ವಲಯದಲ್ಲಿ ಭಾರತದ ಸ್ವಾವಲಂಬನೆಗೆ ಒತ್ತು ನೀಡುತ್ತದೆ ಎಂದು ಹೇಳಿದ್ದರು. ವಾಹನಗಳು ಮತ್ತು ಒತ್ತಡ-ನಿರೋಧಕ ವಸ್ತುಗಳು ಸೇರಿದಂತೆ ಸ್ಥಳೀಯ ಆಳ ಸಮುದ್ರ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವಲ್ಲಿ ದೇಶ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಈಗಾಗಲೇ ಯಶಸ್ವಿ ಪ್ರಯೋಗಗಳು ಪ್ರಗತಿಯಲ್ಲಿವೆ.

><><><><><

ಕಳೆದ ೧೦ ವರ್ಷಗಳಲ್ಲಿ ದೇಶದಲ್ಲಿ ಹಾಲು ಉತ್ಪಾದನೆ ಶೇಕಡ ೬೩ ರಷ್ಟು ಏರಿಕೆಯಾಗಿದ್ದು, ೧೪೬ ದಶಲಕ್ಷ ಟನ್‌ಗಳಿಂದ ೨೩೯ ದಶಲಕ್ಷ ಟನ್‌ಗಳಿಗೆ ತಲುಪಿದೆ. ಜಾಗತಿಕ ಹಾಲು ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿ ಭಾರತ ಮುಂದುವರಿದಿದೆ. ವಿಶ್ವದ ಹಾಲು ಪೂರೈಕೆಯ ಸುಮಾರು ಕಾಲು ಭಾಗದಷ್ಟು ಕೊಡುಗೆ ಭಾರತದ್ದಾಗಿದೆ. ಹೈನುಗಾರಿಕೆಯು ರಾಷ್ಟ್ರೀಯ ಆರ್ಥಿಕತೆಗೆ ಶೇಕಡ ೫ರಷ್ಟು ಕೊಡುಗೆ ನೀಡುತ್ತಿದೆ. ೮ ಕೋಟಿಗೂ ಹೆಚ್ಚು ರೈತರಿಗೆ ನೇರವಾಗಿ ಉದ್ಯೋಗ ನೀಡುತ್ತಿದೆ. ಕಳೆದ ದಶಕದಲ್ಲಿ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಹಾಲಿನ ಲಭ್ಯತೆಯು ತೀವ್ರವಾಗಿ ಹೆಚ್ಚಾಗಿದೆ. ತಲಾ ಹಾಲು ಪೂರೈಕೆ ಶೇಕಡ ೪೮ರಷ್ಟು ಹೆಚ್ಚಾಗಿದೆ ಎಂದು ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ ಮಾಹಿತಿ ನೀಡಿದೆ.

><><><><><

ಪ್ರಧಾನಮಂತ್ರಿ ಧನ-ಧಾನ್ಯ ಕೃಷಿ ಯೋಜನೆಯಡಿ ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯನ್ನು ಮಹತ್ವಾಕಾಂಕ್ಷಿ ಕೃಷಿ ಜಿಲ್ಲೆಯನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಸಚಿವರು, ಇದು ಕೃಷಿ ಉತ್ತೇಜನವನ್ನು ಸೂಚಿಸುತ್ತದೆ ಮತ್ತು ಈ ಪ್ರದೇಶದಲ್ಲಿ ಕೃಷಿ ಉದ್ಯಮವನ್ನು ಪ್ರೋತ್ಸಾಹಿಸುತ್ತದೆ ಎಂದು ಹೇಳಿದರು. ನವದೆಹಲಿಯ ದೀನ್ ದಯಾಳ್ ಉಪಾಧ್ಯಾಯ ಮಾರ್ಗದಲ್ಲಿರುವ ನೂತನ ದೆಹಲಿ ಬಿಜೆಪಿ ಕಾರ್ಯಾಲಯವನ್ನು ಪ್ರಧಾನಿ ನರೇಂದ್ರ ಮೋದಿ ಇಂದು ಉದ್ಘಾಟಿಸಲಿದ್ದಾರೆ. ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿಯವರೊಂದಿಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ದೆಹಲಿಯ ಮುಖ್ಯಮಂತ್ರಿ ರೇಖಾ ಗುಪ್ತಾ, ಪಕ್ಷದ ಹಿರಿಯ ನಾಯಕರು, ಸಂಸದರು, ಶಾಸಕರು, ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ, ವಿದೇಶಾಂಗ ಸಚಿವಾಲಯದ ಸಹಯೋಗದೊಂದಿಗೆ ೧೦೦ಕ್ಕೂ ಹೆಚ್ಚು ದೇಶಗಳಲ್ಲಿ ನಡೆಯುತ್ತಿರುವ ಸೇವಾ ಪಾಕ್ಷಿಕದ ಭಾಗವಾಗಿ ವಿಕಸಿತ ಭಾರತ್ ರನ್ ೨೦೨೫ ಅನ್ನು ಯಶಸ್ವಿಯಾಗಿ ಆಯೋಜಿಸಿದೆ. ರಾಷ್ಟ್ರ ನಿರ್ಮಾಣಕ್ಕಾಗಿ ಸಾಮೂಹಿಕ ಕ್ರಿಯೆಯನ್ನು ಪ್ರೇರೇಪಿಸುವ ಗುರಿಯನ್ನು ಹೊಂದಿರುವ ಈ ಉಪಕ್ರಮದ ಮೊದಲ ಜಾಗತಿಕ ಆವೃತ್ತಿ ಇದಾಗಿದೆ ಎಂದು ಸಚಿವಾಲಯ ತಿಳಿಸಿದೆ. "ರನ್ ಟು ಸರ್ವ್ ದಿ ನೇಷನ್" ಎಂಬ ಟ್ಯಾಗ್‌ಲೈನ್ ಅಡಿಯಲ್ಲಿ ಆಯೋಜಿಸಲಾದ ಈ ಕಾರ್ಯಕ್ರಮವು ಪ್ರಪಂಚದಾದ್ಯಂತದ ವಿವಿಧ ಸ್ಥಳಗಳಲ್ಲಿ ನಡೆದ ಮೂರರಿಂದ ಐದು ಕಿಲೋಮೀಟರ್ ಸಮುದಾಯ ಓಟಗಳಲ್ಲಿ ಉತ್ಸಾಹಭರಿತ ಭಾಗವಹಿಸುವಿಕೆಗೆ ಸಾಕ್ಷಿಯಾಯಿತು.

><><><**END**><><><